## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 983 |
| ಸದಸ್ಯರ ಹೆಸರು | : ಶ್ರೀ ಹೆಚ್.ಎಸ್. ಗೋಪಿನಾಥ್ |
| ಉತ್ತರಿಸುವ ಸಚಿವರು | : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು |
| ಉತ್ತರಿಸುವ ದಿನಾಂಕ | : 11.03.2026 |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಸಂಚರಿಸುವ ಒಟ್ಟು ಬಸ್ಸುಗಳ ಸಂಖ್ಯೆ ಎಷ್ಟು; ಇವುಗಳ ನಿರ್ವಹಣೆಗಾಗಿ ಖರ್ಚಾಗುತ್ತಿರುವ ಮೊತ್ತ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು)</td><td>ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಫೆಬ್ರುವರಿ-2026ರ ಅಂತ್ಯಕ್ಕೆ ಒಟ್ಟು 7025 ಬಸ್ಸುಗಳು ಆಚರಣೆಯಲ್ಲಿರುತ್ತವೆ. ವಿವರ ಕೆಳಕಂಡಂತಿವೆ.<br>
<table>
<tr><th>ಸಂಸ್ಥೆ</th><th>ಡಿಸೇಲ್ ಬಸ್‌ಗಳು</th><th>ವಿದ್ಯುತ್ ಚಾಲಿತ ಬಸ್ಸುಗಳು</th><th>ಒಟ್ಟು</th></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>5246</td><td>1779</td><td>7025</td></tr>
</table>
<br>ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ 2025-26 ನೇ (ಸಂಚಿತ ಡಿಸೆಂಬರ್-2025ರವರೆಗೆ) ಸಾಲಿನಲ್ಲಿ ಇಂಧನ, ಬಿಡಿಭಾಗಗಳು ಮತ್ತು ಜೋಡಣೆಗಳು, ಸಿಬ್ಬಂದಿ ವೆಚ್ಚ, ಅಪಘಾತ ಪರಿಹಾರ ವೆಚ್ಚ ಹಾಗೂ ಇತರೆ ಸಾಮಾನ್ಯ ವೆಚ್ಚಗಳೊಂದಿಗೆ ಬಸ್ಸುಗಳ ನಿರ್ವಹಣೆಗಾಗಿ ಪ್ರತಿ ಕಿ.ಮೀ.ಗೆ 85 ರೂಪಾಯಿ 39 ಪೈಸೆಗಳು ವೆಚ್ಚವಾಗಲಿದೆ.</td></tr>
<tr><td>ಆ.</td><td>ಈ ಸಂಸ್ಥೆಯಲ್ಲಿ ಸಂಚರಿಸುವ ಬಸ್‌ಗಳಿಗೆ ಸರ್ಕಾರದ ಜಾಹೀರಾತು ಹೊರತುಪಡಿಸಿ ಖಾಸಗಿ ಜಾಹೀರಾತುಗಳನ್ನು ಬಸ್‌ಗಳಿಗೆ ಅಳವಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅವುಗಳಿಗೆ ಯಾವ ನಿಯಮದಡಿಯಲ್ಲಿ ಅವಕಾಶ ನೀಡಲಾಗಿದೆ.</td><td>ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಸಾರಿಗೇತರ ಆದಾಯವನ್ನು ಕ್ರೋಢೀಕರಿಸಲು ಬಸ್ಸುಗಳ ಮೇಲೆ ಜಾಹೀರಾತು ಪ್ರದರ್ಶಿಸಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆದು ಆಸಕ್ತ ವ್ಯಕ್ತಿ/ಏಜೆನ್ಸಿ/ಕಂಪನಿಗಳಿಗೆ ನಿಗದಿತ ಅವಧಿಗೆ ಹಾಗೂ ಇತರೆ ನಿಬಂಧನೆಗಳಿಗೆ ಒಳಪಟ್ಟು ಪರವಾನಗಿ ನೀಡುವ ಪದ್ಧತಿ ಜಾರಿಯಲ್ಲಿರುತ್ತದೆ.<br><br>ಟೆಂಡರ್‌ನಲ್ಲಿ ಅತಿ ಹೆಚ್ಚು ಬಿಡ್ (H1) ಮಾಡಿದ ಹಾಗೂ ನಿಗದಿತ ಇ.ಎಂ.ಡಿ ಮೊತ್ತ ಹಾಗೂ ಇನ್ನಿತರ ಅವಶ್ಯಕ ದಾಖಲಾತಿಗಳನ್ನು ಸಲ್ಲಿಸಿದವರನ್ನು ಆಯ್ಕೆಮಾಡಲಾಗುತ್ತದೆ. ಆಯ್ಕೆಯಾದ ಬಿಡ್‌ದಾರರು ಭದ್ರತಾ ಠೇವಣಿ ಪಾವತಿಸಿ ಸಂಸ್ಥೆಯೊಂದಿಗೆ ನಿಗದಿತ ಅವಧಿಗೆ ಬಸ್ಸುಗಳ ಮೇಲೆ ಜಾಹೀರಾತು ಪ್ರದರ್ಶಿಸಲು ಕರಾರು ಒಪ್ಪಂದವನ್ನು ಮಾಡಿಕೊಂಡು, ಕರಾರು ನಿಯಮಾವಳಿಯಂತೆ ಮಾಸಿಕ ಪರವಾನಗಿ ಶುಲ್ಕವನ್ನು ಪಾವತಿಸಬೇಕಾಗುತ್ತದೆ.</td></tr>
</table>

| | | |
|---|---|---|
| | | ಮುಂದುವರೆದು, ಪರವಾನಗಿ ಶುಲ್ಕದ ಜೊತೆಗೆ ಜಾಹೀರಾತು ಪ್ರದರ್ಶಿಸಲಾಗುವ ಪ್ರತಿ ಬಸ್ಸುಗಳಿಗೆ ಅನ್ವಯವಾಗುವ ಇತರೆ ಶುಲ್ಕಗಳನ್ನು ಸಹ ಪಾವತಿಸಬೇಕಾಗಿರುತ್ತದೆ. |
| ಇ. | ಖಾಸಗಿ ಜಾಹೀರಾತುಗಳನ್ನು ಬಸ್‌ಗಳ ಮೇಲೆ ಅಳವಡಿಸಲು ಸರ್ಕಾರವು ನಿಗದಿಪಡಿಸಿದ ಮೊತ್ತ ಎಷ್ಟು; ಹಾಗೂ ಜಾಹೀರಾತುಗಳಿಂದ ಬಂದ ಒಟ್ಟು ಹಣ ಎಷ್ಟು; ಮತ್ತು ಹಣವನ್ನು ಸರ್ಕಾರವು ಯಾವುದಕ್ಕೆ ಬಳಸಿಕೊಳ್ಳಲಾಗುತ್ತಿದೆ; (ಸಂಪೂರ್ಣ ಮಾಹಿತಿ ನೀಡುವುದು. | ಸಂಸ್ಥೆಯ ಕೆಪಿಪಿಪಿ ಟೆಂಡರ್ ಪೋರ್ಟಲ್‌ನಲ್ಲಿ ಮೆ: ಸಾಯಿ ಅಡ್ವರ್ಟೈಸರ್ ರವರು 3000 ಸಾಮಾನ್ಯ ಬಸ್ಸುಗಳಿಗೆ ಪ್ರತಿ ಬಸ್ಸಿಗೆ ಪ್ರತಿ ಮಾಹೆಗೆ ರೂ.12616/- (ತೆರಿಗೆ ಹೊರತುಪಡಿಸಿ) ರಂತೆ ಬಿಡ್ ಮಾಡಿ ಜಾಹೀರಾತು ಅಳವಡಿಸಿ ಪ್ರದರ್ಶಿಸಲು ದಿನಾಂಕ:19.01.2025 ರಂದು ಆಯ್ಕೆಯಾಗಿರುತ್ತಾರೆ. ಆದರೆ, ಪ್ರತಿ ವರ್ಷ ಶೇ.5 ರಷ್ಟು ಪರವಾನಗಿ ಶುಲ್ಕವನ್ನು ಕರಾರು ನಿಯಾಮವಳಿಯಂತೆ ಹೆಚ್ಚಿಸಬೇಕಾಗಿದ್ದು, ಅದರಂತೆ, ಪ್ರಸ್ತುತ ಪ್ರತಿ ಬಸ್ಸಿಗೆ ಪ್ರತಿ ಮಾಹೆಗೆ ರೂ.13,247/- (ತೆರಿಗೆ ಹೊರತುಪಡಿಸಿ) ಗಳನ್ನು ನಿಗಧಿಪಡಿಸಲಾಗಿರುತ್ತದೆ. ಸದರಿ ಜಾಹೀರಾತಿನಿಂದ ಮಾಸಿಕ ರೂ.3,97,41,000/-ಗಳ ಆದಾಯವನ್ನು ಗಳಿಸಲಾಗುತ್ತಿದೆ.<br><br>ಸಂಸ್ಥೆಯ ಕೆಪಿಪಿಪಿ ಟೆಂಡರ್ ಪೋರ್ಟಲ್‌ನಲ್ಲಿ ಮೆ:ಸ್ಪೈನ್ ಪೋಸ್ಟ್ ರವರು 400 ವೋಲ್ವೋ ಬಸ್ಸುಗಳಿಗೆ ಪ್ರತಿ ಮಾಹೆಗೆ ಪ್ರತಿ ಬಸ್ಸಿಗೆ ರೂ.25, 255/- (ತೆರಿಗೆ ಹೊರತುಪಡಿಸಿ) ರಂತೆ ಬಿಡ್ ಮಾಡಿ ಜಾಹೀರಾತು ಅಳವಡಿಸಿ ಪ್ರದರ್ಶಿಸಲು ದಿನಾಂಕ:10.01.2025ರಂದು ಆಯ್ಕೆಯಾಗಿರುತ್ತಾರೆ. ಪ್ರಸ್ತುತ 300 ಬಸ್ಸುಗಳಲ್ಲಿ ಮಾತ್ರ ಜಾಹೀರಾತು ಪ್ರದರ್ಶಿಸಲಾಗುತ್ತಿದೆ. ಆದರೆ, ಪ್ರತಿ ವರ್ಷ ಶೇ.5 ರಷ್ಟು ಪರವಾನಗಿ ಶುಲ್ಕವನ್ನು ಕರಾರು ನಿಯಾಮವಳಿಯಂತೆ ಹೆಚ್ಚಿಸಬೇಕಾಗಿದ್ದು, ಅದರಂತೆ, ಪ್ರಸ್ತುತ ಪ್ರತಿ ಬಸ್ಸಿಗೆ ಪ್ರತಿ ಮಾಹೆಗೆ ರೂ.26,518/- (ತೆರಿಗೆ ಹೊರತುಪಡಿಸಿ) ಗಳನ್ನು ನಿಗಧಿಪಡಿಸಲಾಗಿರುತ್ತದೆ. ಮಾಸಿಕ ರೂ.79,55,400/-,ಗಳ ಆದಾಯವನ್ನು ಗಳಿಸಲಾಗುತ್ತಿದೆ.<br><br>ಸದರಿ ಮೊತ್ತವನ್ನು ಸಂಸ್ಥೆಯ ದೈನಂದಿನ ವೆಚ್ಚಗಳನ್ನು ಪೂರೈಸಿಕೊಳ್ಳಲು ಬಳಸಿಕೊಳ್ಳಲಾಗುತ್ತಿರುತ್ತದೆ. |
| ಈ | ಬೆಂಗಳೂರಿನಲ್ಲಿ ಸಂಚರಿಸುವ ಬಸ್ಸುಗಳ ಮೇಲೆ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಎಂಬ ಹೆಸರು ಕಾಣಿಸದ ಹಾಗೆ ಜಾಹೀರಾತು ನೀಡಲಾಗಿದೆಯೇ; ಹಾಗಿದ್ದಲ್ಲಿ ನಮ್ಮ ಸಂಸ್ಥೆಯ ಹೆಸರುಗಳನ್ನು ನಾವೇ ಮುಚ್ಚಿದ ಹಾಗೇ ಆಗುವುದಿಲ್ಲವೇ; ಈ ಕುರಿತು ಸರ್ಕಾರದ ಕ್ರಮಗಳೇನು; | ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಒಡೆತನದಲ್ಲಿ ಒಟ್ಟು 5246 ಬಸ್ಸುಗಳು ಸಂಚರಿಸುತ್ತಿದ್ದು, ಅವುಗಳಲ್ಲಿ 3300 ಬಸ್ಸುಗಳ ಮೇಲೆ ಸಂಪೂರ್ಣ ಬಸ್ ಜಾಹೀರಾತು (Full Bus Wrap) ಅಳವಡಿಸಿ ಪ್ರದರ್ಶಿಸಲು ಪರವಾನಗಿಯನ್ನು ನೀಡಲಾಗಿರುತ್ತದೆ.<br>ಇನ್ನು ಮುಂದೆ ಸಂಸ್ಥೆಯ ಬಸ್ಸುಗಳ ಮೇಲೆ ಸಂಪೂರ್ಣ ಬಸ್ ಜಾಹೀರಾತು (Full Bus Wrap) ಅಳವಡಿಸಿ ಪ್ರದರ್ಶಿಸಲು ಅವಕಾಶ ನೀಡದಿರುವ ಬಗ್ಗೆ ನಿರ್ಣಯಿಸಲಾಗಿದೆ. |

<table>
<tr>
<td>ಉ.</td>
<td>ಕಳೆದ 03 ವರ್ಷಗಳಲ್ಲಿ ಜಾಹೀರಾತುಗಳನ್ನು ಅಳವಡಿಸಲು ಯಾವ ಯಾವ ಕಂಪನಿಗಳಿಗೆ ಗುತ್ತಿಗೆ ನೀಡಲಾಗಿದೆ? ( ಕಂಪನಿವಾರು/ ಜಾಹೀರಾತುವಾರು ನೀಡಿದ ದಿನಾಂಕ/ಮೊತ್ತ ಹಾಗೂ ಇನ್ನಿತರ ಅಗತ್ಯವಾದ ಸಂಪೂರ್ಣ ಮಾಹಿತಿ ನೀಡುವುದು)</td>
<td>ಸಂಸ್ಥೆಯ ಬಸ್ಸುಗಳಲ್ಲಿ ಜಾಹಿರಾತುಗಳನ್ನು ಅಳವಡಿಸಲು ಈ ಕೆಳಕಂಡ ವಿವರಗಳಂತೆ ಕಂಪನಿಗಳಿಗೆ ಗುತ್ತಿಗೆ ನೀಡಲಾಗಿರುತ್ತದೆ.
<table>
<tr><th>ಕ್ರ. ಸಂ.</th><th>ಪರವಾನಗಿ ದಾರರ ಹೆಸರು</th><th>ಅವಧಿ</th><th>ಒಟ್ಟು ವಾಹನಗಳು</th><th>ಪ್ರಸ್ತುತ ಪ್ರತಿ ಮಾಹೆಗೆ ಪ್ರತಿ ಬಸ್ಸಿಗೆ (ರೂ.ಗಳಲ್ಲಿ)</th><th>ಪ್ರಸ್ತುತ ಪ್ರತಿ ಮಾಹೆಗೆ ಪರವಾನಗಿ ಶುಲ್ಕ (ರೂ.ಗಳಲ್ಲಿ)</th></tr>
<tr><td>1</td><td>ಮೇ||ಸಾಯಿ ಅಡ್ವರ್ಟೈಸರ್ (ದಿನಾಂಕ: 19.01.2025ರಿಂದ)</td><td>2025-2029</td><td>3000</td><td>13,247/-</td><td>3,97,41,000/-</td></tr>
<tr><td>2</td><td>ಮೇ||ಸ್ಪೈನ್ ಫ್ರೋಸ್ಟ್ (ದಿನಾಂಕ : 10.01.2025ರಿಂದ)</td><td>2025-2028</td><td>300</td><td>26,518/-</td><td>79,55,400/-</td></tr>
</table>
</td>
</tr>
</table>

ಕಡತ ಸಂಖ್ಯೆ: ಟಿಡಿ 30 ಟಿಸಿಕ್ಯೂ 2026

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು